# ಅಡುಗೆಮನೆಯಲ್ಲಿ ಶಿವೆ!

'ಓಕೆ ಮೇಕೆ' (ಪ್ರ: ವಸಂತ ಪ್ರಕಾಶನ, ಬೆಂಗಳೂರು) ಚಿಂತಾಮಣಿ ಕೊಡ್ಲೆಕೆರೆ ಅವರ ಮಕ್ಕಳ ಕವಿತೆಗಳ ಸಂಕಲನ. ಈ ಪದ್ಯಪುಸ್ತಕದ 'ಐಸ್ ಕ್ರೀಮ್ ಕೂಟ' ದೇವತೆಗಳ ಹಬ್ಬದ ಮೋಜಿನ ಕಥೆಯನ್ನೊಳಗೊಂಡಿರುವ ಸೊಗಸಾದ ಪದ್ಯ. ಹಬ್ಬ ಎಂದಮೇಲೆ ಆಟ–ತುಂಟಾಟ ಸಹಜವಷ್ಟೆ. ಗಣಪ ಸೊಂಡಿಲೆತ್ತಿ ವರುಣನಿಗೆ ಹೊಡೆದಿದ್ದಾನೆ, ಅದರ ಪರಿಣಾಮವಾಗಿ ಇಳೆಗೆ ಮಳೆಯಾಗಿದೆ. ಗೌರಿ ಎರಚಿದ ಬಣ್ಣದ ನೀರಿನಿಂದಾಗಿ ಶಿವ ಬಚ್ಚಲಿಗೆ ಓಡಿದ್ದಾನೆ. ಅದೇ ಸಮಯದಲ್ಲಿ ರುದ್ರಮುನಿ ದೇವರ ಗಡ್ಡ ಯಾರೋ ಎಳೆದಿದ್ದಾರೆ. ಮುನಿ ಮುನಿದರೆ ಹಬ್ಬದ ಸಂತಸ ಉಳಿದೀತೆ? ಮಕ್ಕಳ ಕಿತಾಪತಿಯನ್ನು ಸರಿಪಡಿಸಬೇಕಾದ ತಾಯಿ ಗಿರಿಜೆ, ಪರಿಸ್ಥಿತಿಯನ್ನು ತಹಬಂದಿಗೆ ತರಲಿಕ್ಕಾಗಿ, ಹಿಮಕೆ ಸಕ್ಕರೆ ಬೆರೆಸಿ ಐಸ್ ಕ್ರೀಮ್ ಮಾಡುತ್ತಾಳೆ. ಅದರ ತಂಪಿಗೆ ರುಚಿಗೆ ಮಾರುಹೋದ ರುದ್ರಮುನಿ ದೇವರು, ನಕ್ಕು, 'ಇನ್ನಷ್ಟು ಮತ್ತಷ್ಟು ತನ್ನಿ' ಎನ್ನುತ್ತಾರೆ. ಇದು ಕವಿತೆಯೊಳಗಿನ ಕಥೆ. ಈ ಕವಿತೆ ಕೊನೆಗೊಳ್ಳುವುದು ಹೀಗೆ: 'ಲೋಕ ಕಾಯುವ ತತ್ವ ಹೊಳೆದುಬಿಟ್ಟಿದೆ ಶಿವೆಗೆ / ಮನದುಂಬಿ ನಕ್ಕನಾ ಗಂಡ / 'ವಿಶ್ವದೆಲ್ಲೆಡೆ ಐಸ್ ಕ್ರೀಮ್ ಕೂಟಗಳ ಮಾಡೋಣ / ಮಿಕ್ಕೆಲ್ಲ ಯೋಜನೆ ದಂಡ!'.

ಚಿಂತಾಮಣಿ ಅವರ 'ಒಂದು ಸಂಸಾರ' ಪದ್ಯವೂ ಅಡುಗೆಮನೆಯಲ್ಲಿ ಶಿವೆಯ ಕೈಚಳಕಕ್ಕೆ ಸಂಬಂಧಿಸಿದ್ದು. 'ಶಿವನ ಹೆಂಡತಿ ಶಿವೆ / ಕೊಂಡು ತಂದಳು ರವೆ / ಮಾಡಿದಳು ಬಿಸಿ ಬಿಸಿ ಉಪ್ಪಿಟ್ಟು / ಜೊತೆಯಲ್ಲಿ ಕೋಡುಬಳೆ ಒಂದಿಷ್ಟು.' ಹೀಗೆ ತಯಾರಾದ ಉಪ್ಪಿಟ್ಟು ಮತ್ತು ಕೋಡುಬಳೆಯನ್ನು – 'ಅಪ್ಪ ಮಕ್ಕಳು ಕೂತು / ತಿಂದರು ಆಡುತ್ತಾ ಮಾತು.' ಆಗ, 'ನಕ್ಕು ಹೇಳಿದಳು ಶಿವೆ / ತರಬೇಕು ಇನ್ನಷ್ಟು ರವೆ!'

ವಸ್ತು ಹಾಗೂ ಪ್ರಾಸಬದ್ಧ ಭಾಷೆಯಿಂದಾಗಿ 'ಐಸ್ ಕ್ರೀಮ್ ಕೂಟ' ಮತ್ತು 'ಒಂದು ಸಂಸಾರ' ಎಳೆಯರಿಗೆ ಮುದನೀಡುತ್ತವೆ. ಇವು ದೊಡ್ಡವರ ಜಗತ್ತನ್ನೂ ಅರಳಿಸಬಲ್ಲ ವಿಶಿಷ್ಟ ರಚನೆಗಳು. 'ಐಸ್ ಕ್ರೀಮಿನಿಂದ ಶಾಂತಿ ಆನಂದ / ಬೆಳೆಸಿಕೊಳ್ಳಿರಿ ಲೋಕಕರುಣ' ಎನ್ನುವ ದರ್ಶನ, ಆಹಾರ – ಅರಿವಿನ ರೂಪವೂ ಆಗಿರುವುದನ್ನು ಧ್ವನಿಸುತ್ತಿದೆ.

ಭಾರತೀಯ ಕುಟುಂಬಪದ್ಧತಿಯಲ್ಲಿ ಅಡುಗೆಮನೆಗೆ ವಿಶೇಷ ಸ್ಥಾನ. ಅಮ್ಮನ ಉಸಿರು ಮತ್ತು ಬೆವರಿನೊಂದಿಗೆ ಮಮತೆಯೂ ಕೂಡಿಕೊಂಡು, ಮನೆಮಂದಿಯ ಜೀವದ್ರವ್ಯ ರೂಪುಗೊಳ್ಳುವ ಪ್ರಯೋಗಶಾಲೆ. ಕುಟುಂಬದ ಸದಸ್ಯರೆಲ್ಲ ಒಟ್ಟುಗೂಡಿ ಹೊಟ್ಟೆ ತುಂಬಿಸಿಕೊಳ್ಳುವ ಸ್ಥಳ. ಮನೆಮಂದಿ ಒಟ್ಟಿಗೆ ಕಲೆತಾಗ ಮಾತಿಗೇನು ಕಡಿಮೆ? ಹೊಟ್ಟೆ ತುಂಬುವುದರೊಂದಿಗೆ ಮನಸ್ಸುಗಳೂ ಪ್ರಫುಲ್ಲಗೊಳ್ಳುವುದು ಅಡುಗೆಮನೆಯ ಬಿಸುಪಿನ ವಾತಾವರಣದಲ್ಲೇ. ಕುಟುಂಬದ ಸಂತಸದೊಂದಿಗೆ ಅಡುಗೆಮನೆ ಹಾಸುಹೊಕ್ಕಾಗಿರುವ ತಾತ್ವಿಕತೆಯನ್ನೇ ಚಿಂತಾಮಣಿ ಅವರ ಕವಿತೆಗಳು ಬಹು ಸೊಗಸಾಗಿ ಹೇಳುತ್ತಿವೆ.

ಮಕ್ಕಳಿಗೆ ಅಪ್ಪನಿಗಿಂತಲೂ ಅಮ್ಮನ ಬಗ್ಗೆ ಯಾಕೆ ಹೆಚ್ಚು ಮಮತೆ ಎನ್ನುವ ಪ್ರಶ್ನೆ ಆಗಾಗ ನಮಗೆ ಎದುರಾಗುತ್ತದಷ್ಟೆ. ಈ ಪ್ರಶ್ನೆಗೆ ಉತ್ತರಗಳಲ್ಲೊಂದು – ಅಮ್ಮನ ಅನ್ನಪೂರ್ಣೆ ರೂಪ. ಚಿಂತಾಮಣಿ ಅವರ ಕವಿತೆಗಳಲ್ಲಿನ ಶಿವೆ ಅನ್ನಪೂರ್ಣೆಯೂ ಹೌದು; ಆಕೆ ಹೊಟ್ಟೆ ತುಂಬಿಸುವುದರೊಂದಿಗೆ ಲೋಕಕರುಣಕ್ಕೆ ಅಗತ್ಯವಾದ ದ್ರವ್ಯವನ್ನೂ ನೀಡಬಲ್ಲ ತಾಯಿ.

ಮಾನುಷಮಾತ್ರರಿಗೆ ಮಾತ್ರವಲ್ಲ, ದೇವತೆಗಳಿಗೆ ಸಂಬಂಧಿಸಿದಂತೆಯೂ ಅಡುಗೆಮನೆ ಸಾವಯವ ಸಂಬಂಧಗಳ ಶಕ್ತಿಕೇಂದ್ರ ಎನ್ನುವುದನ್ನು ಇಲ್ಲಿನ ಮಕ್ಕಳ ಪದ್ಯಗಳು ಹೇಳುವಂತಿವೆ. ದೇವತೆಗಳಾದರೂ ಅಷ್ಟೇ, ಮನುಷ್ಯರಾದರೂ ಅಷ್ಟೇ – ಸಂಬಂಧಗಳಲ್ಲಿ ಪ್ರೀತಿ ಇಲ್ಲದ ಮೇಲೆ ಬದುಕು ಚಿಗುರೀತು ಹೇಗೆ ಎನ್ನುವ ಕಾಣ್ಕೆಯೂ ಇಲ್ಲಿದೆ. 'ವಿಶ್ವದೆಲ್ಲೆಡೆ ಐಸ್ ಕ್ರೀಮ್ ಕೂಟಗಳ ಮಾಡೋಣ / ಮಿಕ್ಕೆಲ್ಲ ಯೋಜನೆ ದಂಡ!' ಎನ್ನುವ ಸಾಲು, ಸಮಕಾಲೀನ ಜಗತ್ತಿನ ಅಭಿವೃದ್ಧಿಮೀಮಾಂಸೆಯನ್ನು ಅಣಕಿಸುವಂತಿದೆ. 'ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು' ಎನ್ನುವ ಮಾತಿದೆಯಷ್ಟೇ. ಈ ಮಾತು ಜನಪ್ರತಿನಿಧಿಗಳ ನಡವಳಿಕೆಗೆ ಹೊಂದುವಂತಹದ್ದು. ಜನರ ಹೊಟ್ಟೆ ತುಂಬಿಸುವುದು ಸಮಾಜಕಲ್ಯಾಣದ ಮೊದಲ ಆದ್ಯತೆಯಾಗಬೇಕು. ಆದರೆ, ಹಸಿದ ಹೊಟ್ಟೆಗಳನ್ನು ತುಂಬಿಸುವುದಕ್ಕಿಂತಲೂ ಸಮಾಜದ ಹೊರನೋಟವನ್ನು ರಂಗುಗೊಳಿಸುವ ಯೋಜನೆಗಳಿಗೆ ಅವರ ಆದ್ಯತೆ.

ಇವತ್ತಿನ ಅಡುಗೆಮನೆಯ ಪರಿಧಿ ಮೇಲ್ನೋಟಕ್ಕೆ ಆಧುನಿಕಗೊಂಡಿದೆ ಹಾಗೂ ವಿಸ್ತಾರಗೊಂಡಿದೆ. ಆದರೆ, ಅದರ ಅಂತಃಸತ್ವ ಮೂಲರೂಪದಲ್ಲಿ ಉಳಿದುಕೊಂಡಿಲ್ಲ. ಅಷ್ಟುಮಾತ್ರವಲ್ಲ, ಮನೆಮಂದಿಯ ಹೊಕ್ಕುಬಳಕೆಯೂ ಕಡಿಮೆಯಾಗಿದೆ. ಇರುವ ಮೂರು ಮತ್ತೊಂದು ಮಂದಿ ಕೂಡ, ಒಮ್ಮೆಗೇ ಊಟಕ್ಕೆ ಕೂರುವ ದೃಶ್ಯಗಳು ವಿರಳವಾಗಿವೆ. ಅಡುಗೆಮನೆ ಮತ್ತು ಕುಟುಂಬದ ನಡುವೆ ಟೀವಿ–ಮೊಬೈಲ್‌ಗಳು ಬಂದಿವೆ. ಮನಸ್ಸುಗಳೊಂದಿಗೆ ಮಾತನಾಡಬೇಕಾದ ಕಣ್ಣುಗಳು ಡಿಜಿಟಲ್ ಪರದೆಗಳಲ್ಲಿ ಮುಳುಗಿರುತ್ತವೆ. ಪರಿಮಳ, ರುಚಿ ಮತ್ತು ಮಮತೆಯ ಸವಿಯಬೇಕಾದ ಮನಸ್ಸುಗಳು ಪರದೆಯ ಪ್ರಖರತೆಯಲ್ಲಿ ಆರ್ದ್ರತೆ ಕಳೆದುಕೊಂಡಿರುತ್ತವೆ.

'ತಿಂದದ್ದು ಮೈಗೆ ಹತ್ತಬೇಕು' ಎನ್ನುತ್ತಿದ್ದರು ಹಿರಿಯರು. ವೈರುಧ್ಯ ನೋಡಿ: ಆಹಾರದ ಸಾರ ಕಡಿಮೆಯಾಗುತ್ತಿರುವ ಬಗ್ಗೆ ನಮಗೆ ಆತಂಕವಿದೆ; ಅಡುಗೆಮನೆಯ ಜೈವಿಕಾಂಶಗಳು ಸವಕಳಿಯಾಗುತ್ತಿರುವ ಬಗ್ಗೆ ಹೆಚ್ಚಿನ ಕಾಳಜಿಯಿಲ್ಲ. ಮೊದಲ ಸಂಗತಿ ನಮ್ಮ ಕೈಯಳತೆ ಮೀರಿದ್ದು. ಅಡುಗೆಮನೆಯ ಸಾರ ಉಳಿಸಿಕೊಳ್ಳುವುದು ನಮ್ಮ ಅಳತೆಯಲ್ಲೇ ಇರುವಂತಹದ್ದು. ಶಿವ–ಶಿವೆಯರ ಅಗತ್ಯ ಕುಟುಂಬಗಳಲ್ಲೂ ಸಮಾಜದಲ್ಲೂ ಇರುವುದನ್ನು ಮನವರಿಕೆ ಮಾಡುವ ಕಾವ್ಯ ಚಿಂತಾಮಣಿಗಳೂ ಹೆಚ್ಚಬೇಕಾದುದು ಇಂದಿನ ಮತ್ತೊಂದು ಅಗತ್ಯ.

■ **ಚಂಪಕಮಾಲಾ**

## ಮಾತೇ ಮುತ್ತು

- ನೀವು ಜೀವನವನ್ನು ಪ್ರೀತಿಸುತ್ತೀರಿ ಎಂದಾದರೆ ಸಮಯ ಹಾಳು ಮಾಡಬೇಡಿ. ಏಕೆಂದರೆ ಸಮಯವೇ ಜೀವನ.

  –ಬ್ರೂಸ್ ಲೀ

- ಸೋಲೆಂಬ ರೋಗಕ್ಕೆ ಕಠಿಣ ಪರಿಶ್ರಮ, ಆತ್ಮವಿಶ್ವಾಸವೇ ಮದ್ದು. ಇದು ಯಾರಲ್ಲಿ ಇರುತ್ತೋ ಅವರಿಗೆ ಯಶಸ್ಸು ಕಟ್ಟಿಟ್ಟ ಬುತ್ತಿ.

  –ಅಬ್ದುಲ್ ಕಲಾಂ

- ಅದೃಷ್ಟ ಎಂದರೆ ಅವಕಾಶವನ್ನು ಪಡೆಯುವವನು, ಬುದ್ಧಿವಂತ ಎಂದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವವನು.

  –ಸ್ವಾಮಿ ವಿವೇಕಾನಂದ

- ಕೈ ಚೆಲ್ಲುವುದೇ ನಮ್ಮ ದೊಡ್ಡ ದೌರ್ಬಲ್ಯ. ಯಶಸ್ಸಿಗೆ ಖಚಿತ ಮಾರ್ಗವೆಂದರೆ ಮತ್ತೆ ಮತ್ತೆ ಪ್ರಯತ್ನಿಸುವುದು.

  –ಥಾಮಸ್ ಅಲ್ವಾ ಎಡಿಸನ್

ಶಕ್ತಿ, ದೈಹಿಕ ಬಲದಿಂದ ಬರುವುದಿಲ್ಲ. ಅದು ಬರುವುದು ಅದಮ್ಯವಾದ ಇಚ್ಛಾಶಕ್ತಿಯಿಂದ.

–ಮಹಾತ್ಮ ಗಾಂಧಿ

- ನಿಜವಾದ ವಿದ್ಯೆ ಮನುಷ್ಯನಿಗೆ ಆಲೋಚಿಸುವುದನ್ನು ಕಲಿಸುತ್ತದೆ.

  –ಹಾ.ಮಾ. ನಾಯಕ

- ಶಾಲೆಯಲ್ಲಿ ವಿದ್ಯೆ ಕಲಿಸುವವರು ಮಾತ್ರ ಶಿಕ್ಷಕರಲ್ಲ. ನಮ್ಮ ಸರಿ–ತಪ್ಪುಗಳನ್ನು ಗುರುತಿಸಿ ಬುದ್ಧಿ ಹೇಳುವ ಪ್ರತಿಯೊಬ್ಬರು ಶಿಕ್ಷಕರೇ.

  –ಎಸ್. ರಾಧಾಕೃಷ್ಣನ್

- ಇಲ್ಲದಿರುವ ದೇವರ ನಂಬುವರು ನನ್ನ ಮುಗ್ಧ ಜನ ಸಾಕ್ಷಿ ಸಮೇತ ಇರೋ ಇತಿಹಾಸ ನಂಬಲಾರರು ನನ್ನ ದಡ್ಡ ಜನ.

  –ಅಂಬೇಡ್ಕರ್

- ಹುಲಿಗೆ ಹುಲ್ಲು ತಿನ್ನುವುದನ್ನು ಕಲಿಸಬಹುದು, ಮೂರ್ಖನಿಗೆ ನೀತಿಯನ್ನು ಕಲಿಸುವುದು ಕಷ್ಟ ಸಾಧ್ಯ.

  –ಲೋಕೋಕ್ತಿ